KARNATAKA STATE AKKAMADEVI WOMENS'S UNIVERSITY VIJAYAPURA

(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

SYNOPTIC NOTE OF RESEARCH WORK

"ಜೋಗ್ಯಾರ ಮಹಿಳೆಯರ ಸಾಂಸ್ಕೃತಿಕ ಅಧ್ಯಯನ"

Submitted to the Karnataka State Akkamahadevi Women's University Vijayapura

DOCTOR OF PHILOSOPY IN WOMEN'S STUDIES

(Reg No:KSAWUV/Ph.D/399/2015-16)

Research Scholar

AMBAKKA MALAGAR

Research Guide

Prof. Laxmidevi. Y.

Chairperson

Department of Women's Studies

Karnataka State Akkamahadevi Women's University Vijayapura

“ಜೋಗ್ಯಾರ ಮಹಿಳೆಯರ ಸಾಂಸ್ಕೃತಿಕ ಅಧ್ಯಯನ”

ಪ್ರವೇಶಿಕೆ:

ಭಾರತ ದೇಶವು ವಿವಿಧ ಬುಡಕಟ್ಟು ಸಮುದಾಯಗಳು ವಾಸಿಸುವ ನಾಡಾಗಿದ್ದು, ಕರ್ನಾಟಕದಲ್ಲಿಯೂ ಹತ್ತು ಹಲವು ಜಾತಿ, ಧರ್ಮ, ಪಂಥ ಹಾಗೂ ವೃತ್ತಿಗಳಿಗೆ ಸೇರಿದ ಜನ ಸಮುದಾಯಗಳನ್ನು ತನ್ನ ಒಡಲಿನಲ್ಲಿರಿಸಿಕೊಂಡಿದೆ. ಕರ್ನಾಟಕದಲ್ಲಿ ಸಂವಿಧಾನಾತ್ಮಕವಾಗಿ ಇಂದು 50 ಸಮುದಾಯಗಳಿಗೆ ಪರಿಶಿಷ್ಟ ಬುಡಕಟ್ಟುಗಳು ನೆಲೆಸಿರುವುದು ಕಂಡುಬರುತ್ತಿದ್ದು ಅವುಗಳನ್ನು ಪರಿಶಿಷ್ಟ ಬುಡಕಟ್ಟು ಪಟ್ಟಿಯಲ್ಲಿ ಸೇರಿಸಲು ಯಾವುದೇ ಪ್ರಯತ್ನಗಳಾಗಿಲ್ಲ, ಅವುಗಳಲ್ಲಿ ಅಡವಿಗೋಲ್ಲರು, ಗೊಂದಲಗರು, ಹೆಳವರು, ಸಿಕ್ಲಗರರು, ಕಂಜರಭಾಟರು, ಮುದ್ದೆ ಕಂಬಾರ, ಫಿಸಾಡಿ ಹೀಗೆ ಹಲವಾರು ಅಲೆಮಾರಿ ಬುಡಕಟ್ಟಿನ ಜನರು ಕರ್ನಾಟಕದ ವಿವಿಧ ಭೌಗೋಳಿಕ ಪರಿಸರದಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಲಿ ಜೋಗಿ ಅಲೆಮಾರಿ ಸಮುದಾಯ ಸಹ ಒಂದಾಗಿದೆ. ಈ ಸಮುದಾಯವು ಅಲೆಮಾರಿ ಜೀವನ ನಡೆಸುವುದರೊಂದಿಗೆ ತನ್ನದೇ ಆದಂತಹ ಭಾಷೆ, ಸಂಸ್ಕೃತಿಯನ್ನು ಹೊಂದಿದೆ ತಾಮ್ರ, ಕಲ್ಲುಬೆಳ್ಳಿ (ಸೀಮೆ ಬೆಳ್ಳಿ) ಹಿತ್ತಾಳೆ ತಗಡುಗಳಿಂದ ಆಭರಣಗಳನ್ನು ಹಾಗೂ ಕೆಲ ಗೃಹಪಯೋಗಿ ವಸ್ತುಗಳನ್ನು ತಯಾರಿಸಿ ಜಾತ್ರೆ, ಸಂತೆಗಳಲ್ಲಿ ಸ್ವಲ್ಪ ಬೆಲೆಗೆ ಮಾರಾಟ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಾರೆ ಇವರು ನಗರದ ಕೊಳಚೆ ಪ್ರದೇಶದಲ್ಲಿ ಮತ್ತು ಗ್ರಾಮಿಣ ಪ್ರದೇಶದ ಕೆಳಜಾತಿ ಸಮುದಾಯದವರು ವಾಸಿಸುವ ಕೇರಿಗಳಲ್ಲಿ ಹಾಗೆಯೇ ಊರ ಹೊರಗಿನ ಬಯಲು ಪ್ರದೇಶಗಳಲ್ಲಿ ತಾತ್ಕಲಿಕ ಗುಡಾರ ಹಾಕಿಕೊಂಡು ವಾಸಿಸುತ್ತಾರೆ. ಇತ್ತಿಚೀನ ದಿನಗಳಲ್ಲಿ ಹಲವಾರು ಗ್ರಾಮಗಳಲ್ಲಿ ನೆಲೆನಿಂತುಕೊಳ್ಳುಲು ಪ್ರಯತ್ತಿಸುತ್ತಿರುವುದು ಕಂಡು ಬರುತ್ತಿದ್ದು ಇಂದು ಅನೇಕ ಗ್ರಾಮಗಳಲ್ಲಿ ನೆಲೆಯೋರಿದ್ದಾರೆ. ಈ ಮಹಿಳೆಯರು ಉಪಜೀವನಕ್ಕಾಗಿ ಬೇರೆ ಬೇರೆ ಸ್ಥಳಗಳಿಗೆ ಮತ್ತು ರಾಜ್ಯದಿಂದ ರಾಜ್ಯಕ್ಕೆ ವಲಸೆ ಹೋಗುತ್ತಲೇ ಇದ್ದಾರೆ. ವಲಸೆ ಹೋಗಲು ಹಲವಾರು ಕಾರಣಗಳುಂಟು ಬಡತನ, ನಿರುದ್ಯೊಗ, ಆಹಾರದ ಸಮಸ್ಯೆಗಳು ಪ್ರಮುಖ ಕಾರಣಗಳಾಗಿವೆ. ತಾವು ವಾಸಿಸುವ ಮೂಲ ಸ್ಥಳಗಳಲ್ಲಿ ಆಹಾರದ ಅಭಾವ ಉಂಟಾದರೆ ಆಹಾರ ದೂರಕುವ ಸ್ಥಳಗಳಿಗೆ ವಲಸೆ ಹೋಗುವರು ವಲಸೆಗೆ ಹಲವು ಕಾರಣಗಳಿವೆ ಎಂದು ಎಸ್.ಎಸ್. ನಂಜಣ್ಣವರ “ ಮಾನವ ಭೊಗೋಳಶಾಸ್ತ್ರ” ಕೃತಿಯ 10 ನೇ ಅಧ್ಯಾಯದಿಂದ ತಿಳಿದು ಬರುತ್ತದೆ. ಇವರು ತಮ್ಮ ನೆಲೆಯ ಸುತ್ತ–ಮುತ್ತಲ ಗ್ರಾಮಗಳಿಗೆ ಹೋಗಿ ತಮ್ಮ ಸಿದ್ಧ ಆಭರಣಗಳನ್ನು ಮತ್ತು ಗೃಹಪಯೋಗಿ ವಸ್ತುಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಜೀವನೋಪಾಯ ಮಾಡುವರು ಜೀವನೋಪಾಯಕ್ಕಾಗಿ ಮಾರಾಟ ಮಾಡಲು ಅಕ್ಕ ಪಕ್ಕದ ಮನೆಗಳಿಗೆ ಊರುಗಳಿಗೆ ತಿರುಗಾಡುವುದರಿಂದ ಇವರದು ಅರೆ ಅಲೆಮಾರಿ ಬದುಕಾಗಿದೆ. ಬಡತನ, ಮೂಢನಂಬಿಕೆ, ಅನಕ್ಷರತೆ, ಮೂಲ ಸೌಕರ್ಯಗಳ ಕೊರತೆ, ಆಹಾರ ಸಮಸೆ, ಸುರಕ್ಷತ ಕುಡಿಯಿವ ನೀರಿನ ಅಭಾವ, ತಾಯಿ ಮತ್ತು ಮಕ್ಕಳ ಆರೋಗ್ಯ ಸಮಸ್ಯೆಗಳು ದಿನನಿತ್ಯದಲ್ಲಿ ಅನುಭವಿಸಿದರೂ ಅದು ಸಮಸ್ಯೆ ಎಂದುಕೊಂಡಿಲ್ಲ. ತಾವು ತಯಾರಿಸಿದ ವಸ್ತುಗಳಾದ ತಗಡು ಡಬ್ಬಿಗಳು ಹಿತ್ತಾಳೆ ತಾಮ್ರಗಳಿಂದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ಮಾರಾಟದಿಂದ ಬಂದ ಹಣವನ್ನು ಖಚ್ಚು ಮಾಡುವ ಪ್ರತಿಯೊಂದು ಹಂತದಲ್ಲೂ

ಮಹಿಳೆಯರ ಪಾಲಿದೆ. ಈ ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಜಿವನದ ಕುರಿತು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪ್ರತಿಯೊಬ್ಬರಿಗೂ ಕೆಲಸ ಮಾಡಲು ಉದ್ಯೋಗದ ಯುಕ್ತ ಆಯ್ಕೆಗೆ ಕೆಲಸ ಮಾಡಲು ನ್ಯಾಯಯುತ ಮತ್ತು ಅನುಕೂಲಕರವಾದ ಪರಿಸ್ಥಿತಿಗಳಿಗೆ ಮತ್ತು ನಿರುದ್ಯೋಗದ ವಿರುದ್ಧ ರಕ್ಷಣೆಗೆ ಹಕ್ಕು ಇರುತ್ತದೆ. ಪ್ರತಿಯೊಬ್ಬರೂ ಯಾವುದೇ ಪಕ್ಷಪಾತವಿಲ್ಲದೆ ಸಮಾನ ಕೆಲಸಕ್ಕೆ ಸಮಾನ ವೇತನಕ್ಕೆ ಹಕ್ಕುಳ್ಳವನಾಗಿರುತ್ತಾರೆ. ಮಾನವ ಗೌರವಕ್ಕೆ ತಕ್ಕುದಾದ ಇರುವಿಕೆಯನ್ನು ಅವರಿಗೂ ಮತ್ತು ಆತನ ಕುಟುಂಬಕ್ಕೂ ಒದಗಿಸಲು ಭರವಸೆ ನೀಡುವಂಥ ನ್ಯಾಯಯುತ ಮತ್ತು ಅನುಕೂಲಕರವಾದ ಸಂಭಾವನೆಯನ್ನು ಮತ್ತು ಅವಶ್ಯವಿದಾಗ ಇತರ ಸಾಮಾಜಿಕ ರಕ್ಷಣೆಯ ಮೂಲಕ ಪಡೆಯಲು ಕೆಲಸ ಮಾಡುವ ಪ್ರತಿಯೊಬ್ಬನಿಗೂ ಹಕ್ಕು ಇರುತ್ತದೆ ಎಂದು ಶ್ರೀ ಸಾಮನ್ಯರಿಗಾಗಿ ಕಾನೂನು ಮಾನವ ಹಕ್ಕುಗಳು ಎನ್. ಎಸ್. ಸಂಗೊಳ್ಳಿ ಅವರ ಕೃತಿಯಿಂದ ತಿಳಿದು ಬರುತ್ತದೆ. ಬಹ್ರಮ ಕಪಾಲಿ, ಜೋಗರ್, ಜೋಗ್ತಿನ್ ಕಪಾಲಿ, ರಾವಳ್, ರವಳಿಯ ಸಂಜೋಗಿ, ಸನ್ಯಾಸಿ, ಜೋಗರ್ ನಾಥ್‌ಪಂಥಿ ಮುಂತಾದ ಹಸೆರುಗಳಿಂದ ಗುರುತಿಸಲಾಗುತ್ತಿದ್ದು ಕರ್ನಾಟಕದಲ್ಲಿ ಇವರ ಜನಸಂಖ್ಯೆ ಸುಮಾರು ಹತ್ತು ಲಕ್ಷ ಎಂಬ ಅಂದಾಜಿದೆ ಎಂದು () ಪುಸ್ತಕದಿಂದ ತಿಳಿದು ಬರುತ್ತದೆ. ಜೋಗಿ ಸಮುದಾಯವು ಸಹ ಮೂಲತ: ಅಲೆಮಾರಿಯಾಗಿದೆ. ಈ ಜಾತಿಯವರು ಜೋಳಿಗೆಯನ್ನು ಹಾಕಿಕೊಂಡು ಕೈಯಲ್ಲಿ ಶುಂಠಿಕಡ್ಡಿಯನ್ನು ಹಿಡಿದುಕೊಂಡು ಹಾಡುಗಳನ್ನು ಹಾಡುತ್ತ ಬಿಕ್ಷೆಯನ್ನು ಬೇಡುತ್ತ ಜೀವನವನ್ನು ಸಾಗಿಸುತ್ತಿದ್ದರು ಇದಲ್ಲದೆ ಇವರ ಮತ್ತೊಂದು ಕುಲಕಸಬು ಬೇಟಿಯಾಗಿತ್ತು ಕಾಡುಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಾಡಲಾಗುತ್ತಿತ್ತು. ಬೇಟೆ ನಿಷೇಧಗೊಂಡು ಈ ಸಮುದಾಯ ನಗರ ಹಳ್ಳಿಗಳಿಗೆ ಬಂದ ನಂತರ ಬೇಟೆ ನಿಂತಿದೆ. ಜೋಗಿ ಸಮುದಾಯದ ಬಹುತೇಕರು ಈಗ ಭಿಕ್ಷೆಯನ್ನು ತೊರೆದು ಸ್ವಯಂ ಉದ್ಯೋಗದ ದಾರಿಗಳನ್ನು ಹುಡುಕಿಕೊಂಡಿದ್ದಾರೆ. ಜರಡಿ ಬುಟ್ಟಿಗಳನ್ನು ತಯಾರಿಸುವುದನ್ನು ಕಲಿತು, ಅವುಗಳನ್ನು ತಯಾರಿಸಿ ಮಾರುತ್ತ ಜೀವನ ಸಾಗಿಸುತ್ತಿದ್ದಾರೆ. ಅಲ್ಲದೆ ಈ ಸಮುದಾಯದವರು ಪಾವು, ಸೇರುಗಳನ್ನು (ಧ್ಯಾನಗಳನ್ನು ಅಳತೆ ಮಾಡುವ ಸಾಧನ) ತಯಾರಿಸುತ್ತಾರೆ. ಇದಲ್ಲದೆ ನಳ, ಕೊಡೆ ರಿಪೇರಿ, ಇತ್ಯಾದಿ ವಸ್ತುಗಳ ರಿಪೇರಿ ಕೆಲಸಗಳನ್ನು ಕಲಿತು ಜೀವನ ನಡೆಸುತ್ತಿದ್ದಾರೆ. ಎಂದು ತಿಳಿದು ಬರುತ್ತದೆ. ಹಾಗೂ ಈ ಜೋಗಿ ಸಮುದಾಯಕ್ಕೊ ಹಂದಿಜೋಗಿ ಸಮುದಾಯಕ್ಕೂ ಜೋಗಿ ಎಂಬ ಸಾಮನ್ಯ ಶಬ್ದದ ಹೊರತಾಗಿ ಅಷ್ಟೇನು ಸಾಮ್ಯೆತೆಗಳಿಲ್ಲ. ಎರಡು ಸಮುದಾಯಗಳು ಆರಂಭದಲ್ಲಿ ಭಿಕ್ಷೆ ಬೇಡುತ್ತಿದ್ದರಿಂದ ಜೋಗಿ ಎಂಬ ಪದ ಎರಡು ಸಮುದಾಯಗಳಿಗೆ ಅಂಟಿಕೊಂಡಿರಬಹುದ ಎಂದು ಈ ಪುಸ್ತಕದಿಂದ ತಿಳಿದು ಬರುತ್ತದೆ. ನಮ್ಮದು ಬಹು ಧರ್ಮ ಬಹು ಜಾತಿ ಹಾಗೂ ಬಹು ಸಂಸ್ಕೃತಿಗಳ ದೇಶ. ಒಂದು ಜಾತಿಗೂ ಮತ್ತೋಂದು ಜಾತಿಗೂ ಸಾಂಸ್ಕೃತಿಕ ವಿಶೇಷತೆಯ ವಿಭಿನ್ನತೆಗಳಿವೆ. ಕಣ್ಣಿಗೆ ಕಾಣುವ ಜಾತಿ ಕುಲಗಳು ಒಂದಷ್ಟಾದರೆ ಕಣ್ಣಿಗೆ ಕಾಣಿಸದ ಅನೇಕ ಜಾತಿ ಕುಲಗಳಿವೆ ಜೋಗಾರ ಸಮುದಾಯ ಕೊಡಾ ಇಂತಹದರ ಪಟ್ಟಿಗೆ ಸೇರುತ್ತದೆ. ಹಲವಾರು ವರ್ಷಗಳಿಂದ ಕರ್ನಾಟಕದಲ್ಲಿ ವಾಸವಾಗಿರುವ ಈ ಸಮುದಾಯದ ಕುರಿತು ಇದುವರೆಗೆ ಕನ್ನಡಲ್ಲಿ ಒಂದು ಪ್ರಕಟಿತ ವರದಿ, ಪುಸ್ತಕ ಇಲ್ಲದೇ ಇರುವುದು ಅತ್ಯಂತ ಆಶ್ಚರ್ಯಕರ. ಜೋಗ್ಯಾರ ಸಮುದಾಯ ಮೂಲತ: ಅಲೆಮಾರಿ ಸಮುದಾಯವಾಗಿದ್ದು ಇತ್ತಿಚಿನ ದಿನಗಳಲ್ಲಿ ನೆಲೆ ನೆಲೆನಿಲ್ಲಲು ಪ್ರಯತ್ನಿಸುತ್ತಿದೆ. ಅಲೆಮಾರಿತನದಿಂದಲೇ ಶಿಕ್ಷಣವಂಚಿತವಾದ ಈ ಸಮುದಾಯ ಇತ್ತಿಚೆಗಷ್ಟೇ ಇತರ ನಾಗರಿಕ

ಸಮಾಜದೊಂದಿಗೆ ಬರೆತು ಬಾಳಲು ಪ್ರಯತ್ನಿಸುತ್ತಿದ್ದಾರೆ. ಜರಡಿ ಬುಟ್ಟಿಗಳನ್ನು ಹಾಗೂ ಪಾವು, ಸೇರುಗಳನ್ನು ತಯಾರಿಸುವುದನ್ನು ಕಲಿತು ಅವುಗಳನ್ನು ತಯಾರಿಸಿ ಬಿಸಿಲು ಮಳೆ ಎನ್ನದೇ ಬೀದಿಯಲ್ಲಿ ಕುಳಿತು ಮಾರಾಟ ಮಾಡುವುದು. ಇದಲ್ಲದೆ ಕೊಡೆ ರಿಪೇರಿ, ಮನೆ ಬೀಗದ ಕೈಯಿ ರಿಪೇರಿ ಇತ್ಯಾದಿ ರಿಪೇರಿ ಕೆಲಸಗಳು, ಕೂಲಿ ಮಾಡುವುದು ಇವರ ಕಸುಬಾಗಿದೆ. ದೇಶ ಅಭಿವೃದ್ಧಿಯಪಥದಲ್ಲಿ ಸಾಗುತ್ತಿರುವಾಗ ಒಂದು ಸಮುದಾಯ ಇಂಥ ಕಾಯಕಗಳಲ್ಲಿ ತೊಡಗಿ ತನ್ನ ಬದುಕಿಗಾ, ಇರವಿಗಾಗಿ ಹರಸಾಹಸ ಪಡುತ್ತಿರುವುದು ಯಾವುದೇ ನಾಗರಿಕ ಸಮಾಜದ ಘನತೆಯನ್ನು ಹೆಚ್ಚಿಸುವುದಿಲ್ಲ ಈ ಸಮುದಾಯವನ್ನು ಸರ್ಕಾರ ಮತ್ತು ಸಮಾಜ ಪ್ರಗತಿಪಥಕ್ಕೆ ತಂದು ನಿಲ್ಲಿಸಲೇಬೇಕು. ಈ ಹಿನ್ನಲೆಯಲ್ಲಿ ಮುಂಬರುವ ದಿನಗಳಲ್ಲಿ ಈ ಸಮುದಾಯದ ಅನುಕೂಲಕ್ಕಾಗಿ ಯೋಜನೆಗಳನ್ನು ರೂಪಿಸಬೇಕು ಎಂದು ನನ್ನ ಆಶಯ.

ಮೂಲ, ಕುಲ– ಜಾತಿ

ಇವರ ಮೂಲದ ಬಗ್ಗೆ ಸ್ಪಷ್ಟವಾದ ಚಿತ್ರಣ ದೂರೆತಿಲ್ಲಾ. ಏಕೆಂದರೆ ಇವರ ಬಗ್ಗೆ ಹೆಚ್ಚಿನ ಅಧ್ಯಯನಗಳು, ಸಂಶೋಧನೆಗಳು ನಡೆದಿಲ್ಲ ಈ ಜಾತಿಯು ಬಹಳಷ್ಟು ಜನರಿಗೆ ಪರಿಚಿತವೆ ಇಲ್ಲ. ವೃದ್ದರಿಂದ ಕಥೆ ಕೇಳಿ ಅವರ ಹೇಳಿದ ಮಾತುಗಳನ್ನು ಆಧರಿಸಿ ಅವರ ಮೂಲವನ್ನು ತಿಳಿಯಲು ಪ್ರಯತಿಸಲಾಗಿದೆ. ಇವರ ಮೂಲದ ಬಗ್ಗೆ ಇವರನೆ ಕೇಳಿದಾಗ ಒಬ್ಬರು ವಡ್ಡೋಡಗಿ ಮತ್ತು ಬೆಳುಂಡಗಿ ಎಂದು ಹೇಳಿದರೆ ಇನ್ನೂಬ್ಬರು ತಾವು ವಾಸಮಾಡುತ್ತಿರುವ ಪ್ರದೇಶವನ್ನೇ ತಮ್ಮ ಮೂಲವೆಂದು ಹೇಳಿದ್ದರು ಇವರ ಮಾತೃ ಭಾಷೆ ಮರಾಠಿ, ಹಿಂದಿ ಹಾಗೂ ಕನ್ನಡವನ್ನಾಡುವುದು ಕಂಡುಬರುತ್ತಿದೆ. ಮಾಹಾರಾಷ್ಟ್ರ ಮತ್ತು ಕರ್ನಾಟಕ ಇವೆರಡೂ ರಾಜ್ಯಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಇವರು ನೆಲೆಸಿದ್ದಾರೆ. ಕರ್ನಾಟಕದಲ್ಲಿ ವಿಜಯಪುರ ಬಸವನ ಬಾಗೇವಾಡಿ, ಸಿಂದಗಿ, ಇಂಡಿ, ಚಡಚಣ ತಿಕೋಟ, ಮನಗೋಳಿ, ಬಾಗಲಕೋಟ, ಬದಾಮಿ, ಆಲಮಟ್ಟಿ ನಿಡಗುಂದಿ, ಕಲಬುರಗಿ, ಸೋಲಾಪುರಗಳಲ್ಲಿ ವಾಸಮಾಡಿದ್ದಾರೆ. ವಿಜಯಪುರ ನಗರದಲ್ಲಿ ಜೋರಾಪುರ ಪೇಟ್, ಕುಂಬಾರಗಲ್ಲಿ ಗುಂಡಬಾವಡಿ ಎಂಬ ಓಣಿಗಳಲ್ಲಿ ವಾಸಮಾಡುತ್ತಿದ್ದಾರೆ. ಜೋಗ್ಯಾರೆಂದರೆ ಎಲ್ಲರೂ ಜೋಗತಿಯರು ಜೋಗಮ್ಮಗಳೆಂದು ತಿಳದುಕೊಳ್ಳುತ್ತಾರೆ ವಾಸ್ತವವಾಗಿ ಜೋಗಾರರು ಬೇರೆ ಜೋಗತಿಯರು ಬೇರೆ. ದಕ್ಷಿಣ ಕರ್ನಾಟಕದಲ್ಲಿ ಜೋಗಪ್ಪಗಳಾಗಲಿ ಎಲಮ್ಮನ ಸಂಪ್ರದಾಯದಲ್ಲಿ ಬರುವ ಜೋಗಮ್ಮಗಾಳಾಗಲಿ ಈ ಜಾರಿಗೆ ಸೇರುವುದಿಲ್ಲ. ಇವರು ಯಾವ ವರ್ಗಕ್ಕೆ ಸೇರಿದ್ದಾರೆ ಎಂಬುದರಲ್ಲಿ ಭಿನ್ನಾಭಿಪ್ರಯಾಗಳಿವೆ, ಇವರು ಬುಡಕಟ್ಟು ಜನಾಂಗಕ್ಕೆ ಸೇಡಿದ್ದಾರೆಂದು "ಕರ್ನಾಟಕ ಬುಡಕಟ್ಟುಗಳು" ಸಂಪುಟ –02 ರಲ್ಲಿ ಉಲ್ಲೇಖಿಸಲಾಗಿದೆ. ಈ ಗ್ರಂಥದಲ್ಲಿ ಕರ್ನಾಟಕ ಬುಡಕಟ್ಟುಗಳಿಗೆ ಸೇರಿದ ಜೋಗಿ ಸಂಪ್ರದಾಯದಲ್ಲಿ ಬರುವ ಎಣ್ಣೆ ಜೋಗಿ , ಬಳಗಾರ ಜೋಗಿ, ಕುಣಬಿ ಜೋಗಿ, ಹಂದಿ ಜೋಗಿ, ಹಿಂದೂ ಜೋಗಿ, ಡಬ್ಬಿ ಜೋಗಿ ಜಾತಿಯು ಸೇರಿದೆ ಎಂದು ಉಲ್ಲೇಖಿಸಿದೆ. ಬೈಲಪತ್ತಾರ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಮತ್ತು ಚ.ನ.ಶಂಕರಾವ ಅವರ ಸಮಾಜ ಮತ್ತು ಸಂಸ್ಕೃತಿ ಗ್ರಂಥದಲ್ಲಿ ಅಂಯ್ಯಗಾರ ವರದಿ ಪ್ರಕಾರ ಇವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆಂದು ಉಲ್ಲೇಖವಿದೆ. **ಪ್ರೊ. ಆರ್ ಅನುರಾಧ ಪಟೇಲ್ ಅವರ "ಹಂದಿಜೋಗಿ ಕುಲಶಾಸ್ತ್ರೀಯ ಮತ್ತು ಸಾಮಾಜಿಕ ಅಧ್ಯಯನ "** ಎಂಬ ಪುಸ್ತಕದಲ್ಲಿ ಹಂದಿಜೋಗಿ ಹಿನ್ನೆಲೆ ಪೌರಾಣಿಕ/ ಐತಿಹಾಸಿಕ ಜೋಗಿ ಹೆಸರಿನ ಹಲವು ಸಮುದಾಯಗಳು, ಆಚರಣೆಗಳು ಕುರಿತಾಗಿ

ಸವಿಸ್ತಾರವಾಗಿ ವಿವರಿಸಿದ್ದಾರೆ. ಜೋಗಿ ಎಂಬ ಪದವು ಹಲವು ಜಾತಿಗಳಿಗೆ ಜೋಡಿಕೆಯಾಗಿರುವುದರಿಂದ ಈ ಸಮುದಾಯಗಳ ಕುರಿತು ಗೊಂದಲಗಳು ಮೂಡವುದು ಸಹಜ ಕರ್ನಾಟಕದಲ್ಲಿ ಬರಿಯ ಜೋಗಿ ಎಂಬ ಹೆಸರಲ್ಲಿ ಕರೆಯಲ್ಪಡುವ ಸಮುದಾಯವೊಂದಿದೆ. ಈ ಜಾತಿ ಹಿಂದುಳಿದಿದ್ದರೂ ಸಾಮಾಜಿಕವಾಗಿ ಹಂದಿಜೋಗಿಗಳಿಗಿಂದ ಹೆಚ್ಚಿನ ಸ್ಥಾನದಲ್ಲಿದೆ. ಹೀಗಾಗಿ ಜೋಗಿ ಸಮುದಾಯ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ –1 ರಲ್ಲಿ ಇದ್ದರೆ ಜೋಗಿ ಸಮುದಾಯ ಪರಿಶಿಷ್ಟ ಜಾತಿಯಲ್ಲಿ ಇದೆ.

ಅಧ್ಯಯನದ ಉದ್ದೇಶಗಳು

01.ಜೋಗ್ಯಾರ ಮಹಿಳೆಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನ ಮಾನವನ್ನು ಹಾಗೂ ಆರೋಗ್ಯದ ಸ್ಥಿತಿಗತಿಯನ್ನು ತಿಳಿಯುವುದು

02.ಸಾಂಪ್ರದಾಯಿಕ ವೃತ್ತಿ ಅಥವಾ ಕುಲವೃತಿಯಲ್ಲಿ ಮಹಿಳೆಯರ ಪಾತ್ರ ಅಥವಾ ಸ್ಥಾನಮಾನವನ್ನು ತಿಳಿಯಿವುದು.

03.ಪ್ರಸುತ್ತದಲ್ಲಿ ಈ ಮಹಿಳೆಯರು ಎದುರುತ್ತಿಸುತ್ತಿರುವ ಸಮಸ್ಯೆಯನ್ನು ಮತ್ತು ಸವಾಲುಗಳನ್ನು ಸ್ತ್ರೀವಾದಿ ದೃಷ್ಠಿಕೋನದಿಂದ ಪರಿಶೀಲಿಸುವುದು

04ಈ ಸಮುದಾಯದವರು ಸರ್ಕಾರ ಮತ್ತು ಸಕಾರೇತ್ತರ ಸಂಸ್ಥೆಗಳಿಂದ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆಯೇ ಎಂಬುದನ್ನು ತಿಳಿಯಿವುದು ಮತ್ತು ಅವರ ಅಭಿವೃದ್ಧಿಗಾಗಿ ಪರಿಹಾರೋಪಯಗಳನ್ನು ಸೂಚಿಸುವುದು ಅಥವಾ ಶಿಫಾರಸ್ಸುಗಳನ್ನು ನೀಡುವುದು.

ಅಧ್ಯಯನದ ಮಹತ್ವ :

ಈ ಅಧ್ಯಯನವು ಜೋಗ್ಯಾರ ಮಹಿಳೆಯರ ಸಾಂಸ್ಕೃತಿಕ ಆಯಾಮಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಜೋಗ್ಯಾರ ಮಹಿಳೆಯರನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮೂಲಕ ವಿಶ್ಲೇಷಣೆಗೆ ಒಳಪಡಿಸಿದೆ. ಪ್ರಸ್ತುತ ಅಧ್ಯಯನವು ಜೋಗ್ಯಾರ ಸಮುದಾಯದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಸಾಂಸ್ಕೃತಿಕ ವಿಷಯಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕಾದ ಅಗತ್ಯವಿದೆ. ಸಮಾಜದಲ್ಲಿ ಬಹು ಕಾಲದಿಂದಲೂ ವ್ಯವಸ್ಥೆಯಲ್ಲಿ ಪಿತೃಪ್ರಧಾನ ವ್ಯವಸ್ಥೆ ಆಳವಾಗಿ ಬೇರೂರುದೆ. ಈ ವ್ಯವಸ್ಥೆಯು ಹುಟ್ಟು ಹಾಕಿರುವ ಲಿಂಗ, ಜಾತಿ, ವರ್ಗ, ಧರ್ಮ ಅಸಮಾನತೆಗಳು ಮಹಿಳೆಯರ ಮೇಲಿನ ದೌರ್ಜನ್ಯ, ಶೋಷಣೆ, ಅನ್ಯಾಯಕ್ಕೆ ಕಾರಣವಾಗಿದೆ. ಜೋಗ್ಯಾರ ಮಹಿಳೆಯರು ಶಿಕ್ಷಣದಿಂದ ದೂರವಿದ್ದು, ತಮ್ಮ ಕುಟುಂಬ ನಿರ್ವಹಣೆಯಲ್ಲಿ ತುಂಬಾ ಮಹತ್ವ ಪಡೆದುಕೊಂಡಿದ್ದಾರೆ. ಪುರುಷರಕ್ಕಿಂತಲೂ ಮಹಿಳೆಯರು ಶ್ರಮದಾಯಕ ಕೆಲಸ ಮಾಡಿ, ಪುರುಷರು ತಯಾರಿಸಿದ ವಸ್ತುಗಳನ್ನು ಊರೂರು ತಿರುಗಿ ಆದಾಯ ಪಡೆಯುವ ಕೆಲಸ ಮಹಿಳೆಯರದ್ದಾಗಿದೆ. ಅಲ್ಲದೆ ಪಿತೃಪ್ರಧಾನತೆಯು ಮಹಿಳೆಯರಿಗೆ ಅದುವೆ ಸತ್ಯವೆಂದು ಒಪ್ಪಿಸಲಾಗಿದೆ. ಜೋಗ್ಯಾರ ಸಮುದಾಯವುಗಳಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳಲ್ಲಿ ಒಂದಾಗಿದ್ದು, ಮಹಿಳೆಯರ ಶೋಷಣೆ ವೃತ್ತಿ ಕೌಶಲ್ಯ, ವ್ಯವಹಾರ ಜ್ಞಾನ ಸ್ವಲ್ಪ ಮಟ್ಟದ ಸ್ವಾಯತ್ತತೆಯಿಂದಾಗಿ ಜೋಗ್ಯಾರ ಮಹಿಳೆಯರು ವಿಶಿಷ್ಟವಾಗಿದ್ದಾರೆ. ಜೊತೆಗೆ ತಮ್ಮ ಸಂಸ್ಕೃತಿಕ ವೈಶಿಷ್ಟ್ಯತೆಯನ್ನು ಹೊಂದಿದ್ದಾರೆ. ಈ ಮಹಿಳೆಯರ ಸ್ಥಿತಿಗತಿಗಳನ್ನು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಣೆ ಮಾಡುತ್ತಿರುವ ಕಾರಣಕ್ಕೆ ಈ ಅಧ್ಯಯನ ಮಹತ್ವದ್ದಾಗಿದೆ.

ಅಧ್ಯಯನದ ವೈಧಾನಿಕತೆ :

ಪ್ರಸ್ತುತ ಜೋಗ್ಯಾರ ಮಹಿಳೆಯರ ಕುರಿತು ಅಧ್ಯಯನವನ್ನು ಸ್ತ್ರೀವಾದಿ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಂಡಿದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಮಾಹಿತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ಜೋಗ್ಯಾರ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯಲು ಮಾಹಿತಿ ಸಂಗ್ರಹಣೆಗೆ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳೆರಡನ್ನು ಅಳವಡಿಸಿಕೊಳ್ಳಲಾಗಿದೆ. ಗುಣಾತ್ಮಕ ವಿಧಾನಗಳಲ್ಲಿ ಪ್ರಮುಖ ವಿಧಾನಗಳಾದ ಸಹಭಾಗಿತ್ವ ಅವಲೋಕನ, ಪ್ರಕರಣ ಅಧ್ಯಯನಗಳ ವಿಧಾನಗಳು ಜೋಗ್ಯಾರ ಮಹಿಳೆಯರ ಸ್ಥಿತಿಗತಿ ಹೊರತರಲು ಸಹಾಯಕವಾಗಿದೆ. ಜೋಗ್ಯಾರ ಮಹಿಳೆಯರ ಬದುಕಿನ ವಿವಿಧ ಆಯಾಮಗಳನ್ನು ಸೂಕ್ಷ್ಮವಾಗಿ ಗ್ರಹಿಸಲಾಗಿದೆ. ಪರಿಮಾಣಾತ್ಮಕ ವಿಧಾನ ದತ್ತಾಂಶಗಳ ಆಧಾರದ ಮೇಲೆ ಶೋಧನೆ ಮಾಡಲಾಗಿದೆ. ಈ ವಿಧಾನ ವಸ್ತು ನಿಷ್ಠವಾಗಿದೆ ಸಂದರ್ಶನ ಕೈಪಿಡಿಯ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ಎಕ್ಸೆಲ್ ಶೀಟ್‌ನಲ್ಲಿ ಎಂಟ್ರಿ ಮಾಡಿ, ಅಂಕಿ ಅಂಶಗಳನ್ನು ಕೋಷ್ಟಕ ಮತ್ತು ಗ್ರಾಫ್ಸ್ ರೂಪದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಯನವನ್ನು ಸ್ತ್ರೀವಾದಿ ಸಂಶೋಧನಾ ವಿಧಾನದ ಮೂಲಕ ಕೈಗೊಳ್ಳಲಾಗಿದೆ. ಸ್ತ್ರೀವಾದಿ ಸಂಶೋಧನಾ ವಿಧಾನವು ಸ್ತ್ರೀ ಕೇಂದ್ರಿತವಾಗಿದ್ದು, ಸ್ತ್ರೀವಾದಿ ದೃಷ್ಟಿಕೋನವನ್ನು ಹೊಂದಿರುತ್ತದೆ ಹಾಗೂ ಸ್ತ್ರೀವಾದಿ ಸಂಶೋಧನೆಯು ಸ್ತ್ರೀಯರ ನೈಜಸ್ಥಿತಿಯನ್ನು ತಿಳಿದು ಅವರ ಜೀವನದ ರೀತಿಯನ್ನು ಸರಿಯಾಗಿ ಚಿತ್ರಿಸುತ್ತದೆ. ಪ್ರಸ್ತುತ ಸಂಶೋಧನಾ ಅಧ್ಯಯನವು ಬಹುಮುಖ್ಯವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿರುವುದರಿಂದ ವಕ್ತೃಗಳು ನೀಡಿದ ಮಾಹಿತಿಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.

ಅಧ್ಯಯನದ ವಾಪ್ತಿ

ವಿಜಯಪುರ ಜಿಲ್ಲೆಯು ಐತಿಹಾಸಿಕವಾಗಿ ಬಹಳ ಪ್ರಾಮುಖ್ಯತೆಯನ ಪಡೆದಿದೆ ಅಲ್ಲದೆ ಹಲವಾರು ಅಲೆಮಾರಿ ಸಮುದಾಯಗಳಿಗೆ ನೆಲೆಯಾಗಿದೆ. ಅದರಲ್ಲೂ ವಿಶೇಷವಾಗಿ ಜೋಗಿ ಸಮುದಾಯದವರು ಇಲ್ಲಿ ವಾಸವಾಗಿದ್ದು ಒಟ್ಟು 500 ಮನೆಗಳಿವೆ, ಮಹಿಳೆಯರು ಶಿಕ್ಷಣದಿಂದ ದೂರವಿದ್ದು, ಹೆಚ್ಚಾಗಿ ತಮ್ಮನ್ನು ತಾವು ಸಾಂಪ್ರದಾಯಿಕ ವೃತಿಯಲ್ಲಿ ಇವರು ತೊಡಗಿಸಿಕೊಂಡಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಿ ಇವರ ಪಾಲುಗಾರಿಕೆ ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ವಿಜಯಪುರ ಜಿಲ್ಲೆಯ ಐದು ತಾಲ್ಲೂಕುಗಳಾದ ವಿಜಯಪುರ. ಸಿಂದಗಿ, ಇಂಡಿ, ಬಸವನ ಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲ್ಲೂಕುಗಳನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಲಾಗಿದೆ.

ಜೋಗ್ಯಾರ ಮಹಿಳೆಯರ ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗತಿ ಕುರಿತು ಅಧ್ಯಯನಗಳು ನಡೆದಿಲ್ಲ ಆ ಕುರಿತು ಆಳವಾದ ಅಧ್ಯಯನ ನಡೆಸುವ ಸಲುವಾಗಿ ವ್ಯಾಪ್ತಿಯನ್ನು ವಿಜಯಪುರ ಜಿಲ್ಲೆಗಷ್ಟೇ ಸೀಮಿತಗೊಳಿಸಲಾಗಿದೆ. ಇವರ ಜನಸಂಖ್ಯೆ ಇಂತಿಷ್ಟೇ ಇದೆ ಎಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಇವರು ಒಂದೆ ಪ್ರದೇಶದಲ್ಲಿ ನಿಶ್ಚಿತವಾಗಿ ನೆಲೆಯೊರಿಲ್ಲ ಆದರೂ ಒಂದು ಅಂದಾಜಿನ

ಪ್ರಕಾರ ವಿಜಯಪುರ ತಾಲ್ಲೂಕದಲ್ಲಿ ಸುಮಾರು 500 ಕುಟುಂಬಗಳು ವಾಸಸುತ್ತಿದ್ದಾರೆ. ಮತ್ತು ಇವರು ಜನಸಂಖ್ಯೆ 1000 ಆಗಿದೆ. ಅದರಲ್ಲಿ ಪ್ರತಿ ತಾಲ್ಲೂಕಿನ ಐದು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಪ್ರತಿ ಗ್ರಾಮದಿಂದ ಎಂಟು ಜನ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಸಾಂಪ್ರದಾಯಿಕ ವೃತಿಯನ್ನು ಮಾಡುತ್ತಿರುವ ಒಟ್ಟು 200 ಜೋಗ್ಯಾರ ಮಹಿಳೆಯರನ್ನು ಸರಳ ಯಾದೃಚ್ಛಿಕವಾಗಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗುವುದು.

ಅಧ್ಯಯನದ ಮಿತಿಗಳು

1. ವಿಜಯಪುರ ಜಿಲ್ಲೆಯ ಜೋಗ್ಯಾರ ಮಹಿಳೆಯನ್ನು ಎಲ್ಲಾ ವಯೋಮಾನದ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.
2. ಈ ಅಧ್ಯಯನವು ವಿಜಯಪುರ ಜಿಲ್ಲೆಗೆ ಮಾತ್ರ ಸಿಮೀತವಾಗಿದೆ.
3. ಸಂಶೋಧನೆಯ ಕೇವಲ ಒಂದು ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದು. ಅಧ್ಯಯನಕ್ಕೆ 200 ಮಹಿಳಯರನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗುವುದು.
4.

ಮಾಹಿತಿ ಸಂಗ್ರಹಣೆ:

ಕ್ಷೇತ್ರಕಾರ್ಯದ ಮೂಲಕ ಮಹಿಳೆಯರನ್ನು ಸಂದರ್ಶಿಸಿ, ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವಲೋಕನದ ಮೂಲಕ ಅವರ ಸ್ಥಿತಿಯನ್ನು ಅರಿಯಲಾಗಿದೆ. ಪ್ರಸ್ತುತ ಅಧ್ಯಯನವು 200 ವಕ್ತೃಗಳನ್ನು ಒಳಗೊಂಡಿದೆ. ಇವರಲ್ಲಿ ಅತೀ ಹೆಚ್ಚು ಮಹಿಳೆಯರು ಸಚಿತೆ, ಜಾತ್ರೆ ಮತ್ತು ಊರೂರು ತಿರುಗಿ ವಸ್ತುಗಳನ್ನು ಮಾರುತ್ತಿರುವ ಮಹಿಳೆಚುರು ಇದ್ದಾರೆ.

ಈ ಅಧ್ಯಯನವನ್ನು ಸಂದರ್ಶನ, ಅವಲೋಕನ, ಪ್ರಕರಣ ಅಧ್ಯಯನಗಳು ಒಳಗೊಂಡಿವೆ. ಜೊತೆಗೆ ಸಂಶೋಧನೆಗಾಗಿ ಅನುಷಂಗಿಕ ಮಾಹಿತಿಯನ್ನು ಪುಸ್ತಕಗಳು, ಲೇಖನಗಳು ಹಾಗೂ ಅಂತರ್ಜಾಲದ ಮೂಲಕ ಸಂಗ್ರಹಿಸಲಾಗಿದೆ. ಸಂಶೋಧನಾ ಅಧ್ಯಯನದಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವಿಜಯಪುರ ಜಿಲ್ಲೆಯ ಐದು ತಾಲೂಕುಗಳ ಗ್ರಾಮದ ಜನತೆಯೊಂದಿಗೆ ಮುಕ್ತವಾಗಿ ಚರ್ಚಿಸಲು, ಅದರಲ್ಲೂ ವಿಶೇಷವಾಗಿ ಈ ಜಿಲ್ಲೆಯ ಜೋಗ್ಯಾರ ಮಹಿಳೆಯರು ಆರಂಭದಲ್ಲಿ ಹಿಂಜರಿಯುತ್ತಿದ್ದರು. ಅವರ ಜೊತೆ ಆತ್ಮೀಯವಾಗಿ ಮಾತನಾಡಿ, ಅವರ ವಿಶ್ವಾಸ ಗಳಿಸಿ, ನಿಕಟವಾಗಿ ಬೆರೆತು ಜೋಗ್ಯಾರ ಮಹಿಳೆಯರ ಆಚರಣೆಗಳ ವಿವರಗಳನ್ನು ದಾಖಲಿಸಿಕೊಳ್ಳಲಾಗಿದೆ. ಇವೆಲ್ಲದರಿಂದ ಸುಮಾರು 200 ಜೋಗ್ಯಾರ ಮಹಿಳೆಯರ ಜೀವನ ಚಕ್ರ, ಆಚರಣೆಗಳು ಇನ್ನೂ ಮುಂತಾದವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿದೆ. ಒಟ್ಟಾರೆಯಾಗಿ, ಅವರ ವಿವಿಧ ಆಚರಣೆಗಳನ್ನು ಬಹಳ ಹತ್ತಿರದಿಂದ ಗಮನಿಸಲಾಗಿದೆ. ರಚಿತ ಮತ್ತು ಅರಚಿತ ಪ್ರಶ್ನೆಗಳ ನೆರವಿನಿಂದ ಅವರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಪ್ರಾಥಮಿಕ ಮಾಹಿತಿ : ವಿಜಯಪುರ ಜಿಲ್ಲೆಯ ಐದು ತಾಲ್ಲೂಕಿನ ಗ್ರಾಮಗಳಿಗೆ ಹೋಗಿ ವಕ್ತ್ಯಗಳನ್ನು ಭೇಟಿ ಮಾಡಿ ಸಂದರ್ಶನ ಕೈಪಿಡಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ವಕ್ತ್ಯಗಳು ವಾಸ ಮಾಡುವ ಸ್ಥಳಗಳಿಗೆ ಹೋಗಿ ಅವರ ಸ್ಥಿತಿಗತಿಗಳನ್ನು ಅರಿಯಲಾಗಿದೆ

ಮಾಧ್ಯಮಿಕ ಮಾಹಿತಿ : ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಧ್ಯಮಿಕ ಮಾಹಿತಿಯನ್ನು ಅಧ್ಯಯನಕ್ಕೆ ಪೂರಕವಾಗಿರುವ ಸಂಶೋಧನಾ ಅಧ್ಯಯನಗಳು, ಸಂಶೋಧನದ ಲೇಖನಗಳು ಸಂಶೋಧನೆಗೆ ಸೂಕ್ತವಾದ ಮಾಹಿತಿಯನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಮಾಹಿತಿ ಸಂಗ್ರಹಣ ವಿಧಾನಗಳು

ಪ್ರಶ್ನಾವಳಿ: ಸಂಶೋಧನೆಗೆ ಬೇಕಾಗುವ ಮಾಹಿತಿ ಸಂಗ್ರಹಣೆಯ ಒಂದು ಪ್ರಮುಖ ಸಾಧನವಾಗಿರುವ ಪ್ರಶ್ನಾವಳಿಯನ್ನು ಈ ಜಿಲ್ಲೆಯ ಜೋಗ್ಯಾರ ಮಹಿಳೆಯರಿಗೆ ಸಂಬಂಧಿಸಿದ ರಚಿತ ಮತ್ತು ಅರಚಿತ ಪ್ರಶ್ನೆಗಳನ್ನು ಒಳಗೊಳಿಸಿ ಅಧ್ಯಯನಕ್ಕೆ ಸಿದ್ಧಪಡಿಸಲಾಯಿತು. ಮಹಿಳೆಯರನ್ನು ವೈಯಕ್ತಿಕವಾಗಿ ಭೇಟಿಯಾಗಿ ಮನವೊಲಿಸಿ ಅಧ್ಯಯನಕ್ಕಾಗಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಸಾಂದರ್ಭಿಕ ಅಗತ್ಯಕ್ಕೆ ತಕ್ಕಂತೆ ಕೆಲ ಮಹತ್ವದ ಅರಚಿತ ಪ್ರಶ್ನಾವಳಿಯ ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಸಂದರ್ಶನ: ಜೋಗ್ಯಾರ ಮಹಿಳೆಯರು ಹೆಚ್ಚಾಗಿ ಅನಕ್ಷರಸರಾಗಿರುವುದರಿಂದ ಅವರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಮತ್ತು ಅವರ ಜೊತೆ ಸಂವಾದ ಮಾಡಲು ಸಂದರ್ಶನ ವಿಧಾನ ಪರಿಣಾಮಕಾರಿ ವಿಧಾನವಾಗಿದೆ. ಸಂಶೋಧನಾ ವಿಷಯದ ಬಗ್ಗೆ ಮಾಹಿತಿಯನ್ನು ಪಡೆಯಲು ಜೋಗ್ಯಾರ ಮಹಿಳೆಚುರನ್ನು ನೇರವಾಗಿ ಮುಖಾಮುಖಿಯಾಗಿ ಭೇಟಿ ಮಾಡಲಾಯಿತು.

ಪ್ರಕರಣ ಅಧ್ಯಯನ: ಜೋಗ್ಯಾರ ಮಹಿಳೆಯರ ಬದುಕಿನ ಒಳನೋಟ ತಿಳಿಯಲು ಮತ್ತು ಮಹಿಳೆಯರ ವಲಸೆಯ ಬದುಕು, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯನ್ನು ಪ್ರಕರಣ ಅಧ್ಯಯನ ಮೂಲಕ ತಿಳಿಯಲಾಯಿತು.

ಸಾಹಿತ್ಯಾವಲೋಕನ :

ಯಾವುದೇ ಒಂದು ಸಂಶೋಧನೆ ಕೈಗೊಳ್ಳಬೇಕಾದರೆ ಅದರಲ್ಲಿ ಸಾಹಿತ್ಯಾವಲೂಕನದ ಪಾತ್ರವು ಸಹ ತುಂಬಾ ಮಹತ್ವವನ್ನು ಪಡೆದುಕೊಂಡಿರುತ್ತದೆ. ಸಂಶೋಧನಗೆ ಬೇಕಾದ ಸಾಹಿತ್ಯ ವಿರ್ಮಶೇಯು ಸಂಶೋಧನೆಗೆ ತುಂಬಾ ಅತ್ಯಶ್ಯವಾದದ್ದು ಸಂಶೋಧನೆಯಲ್ಲಿ ಸಾಹಿತ್ಯಾವಲೋಕನವು ಸಂಶೋಧನಾ ವಿಷಯದ ಆಳವನ್ನು ಅದರ ವ್ಯಾಪ್ತಿಯನ್ನು ವಿವರಿಸುತ್ತದೆ. ಇವರ ಮೂಲದ ಬಗ್ಗೆ ಅಭ್ಯಸಿಸುವಾಗ ಇವರು ಯಾವ ವರ್ಗಕ್ಕೆ ಸೇರಿದ್ದಾರೆ ಎಂಬುದರಲ್ಲಿ ಭಿನ್ನಾಭಿಪ್ರಾಯಗಳಿವೆ ಇವರು ಬುಡಕಟ್ಟು ಜನಾಂಗಕ್ಕೆ ಸೇರಿದ್ದಾರೆಂದು " ಕರ್ನಾಟಕ ಬುಡಕಟ್ಟುಗಳು " ಸಂಪುಟ –02 ಗ್ರಂಥದಲ್ಲಿ ಉಲ್ಲೇಖ ವಿದೆ. ಚ.ನ ಶಂಕರರಾವ ಅವರ ಸಮಾಜ ಮತ್ತು ಸಂಸ್ಕೃತಿ ಗ್ರಂಥದಲ್ಲಿ ಇವರು ಹಿಂದುಳಿದ ವರ್ಗಕ್ಕೆ ಸೇರಿರುತ್ತಾರೆ ಎಂದು ಉಲ್ಲೇಖ ಇದೆ. ಬೈಲಪತ್ತಾರ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಲ್ಲಿ ಅಲೆಮಾರಿ ಸಮುದಾಯಗಳು ತನ್ನ ಮೂಲ ಐಡೆಂಟಟಿ

ಮರೆಸುವುದರಿಂದ ತಮ್ಮಗೆ ಸಾಮಾಜಿಕ ಮನ್ನಣೆ ದೋರೆಯುವುದೆಂದು ಹಂಡಿ ಅಥವಾ ಹಂದಿ ಜೋಗಿಯರು ಅಥವಾ ಜೋಗಿ ಎಂಬ ಇತ್ಯಾದಿ ಪದಗಳ ಹಿಂದೆ ಜೋತ್ತುಬಿದ್ದವು. ಕಾರಣ ಅಂದು ದಾಸ, ಜಂಗಮ, ಜೋಗಿ ಪದಗಳಿಗೆ ಸಮಾಜದಲ್ಲಿ ವಿಶೇಷ ಮನ್ನಣೆ ಇತ್ತು. ಜೋಗಿ ಪದದ ಮೂಲವನ್ನು ತಿಳಿಸುತ್ತದೆ.

ಉಪಸಂಹಾರ :

ಜೋಗಿ ಸಮುದಾಯವು ಅತ್ಯಂತ ಹಿಂದುಳಿದ ಮತ್ತು ಕೆಳಮಟ್ಟದಲ್ಲಿ ಇರುವ ಸಮುದಾಯವಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದರೂ ದುಡಿಮೆ ವೃತ್ತಿ ಪರತೆ, ಕೌಶಲ್ಯ ವ್ಯವಹಾರ ಜ್ಞಾನಗಳ ದೃಷ್ಟಿಯಲ್ಲಿ ವಿಶಿಷ್ಟವಾದ ಸಮುದಾಯವಾಗಿದೆ. ತನ್ನ ವಿಶಿಷತೆಯ ಮೂಲಕವೇ ಭಾರತೀಯ ಸಂಸ್ಕೃತಿಗೆ ಅಪಾರವಾದ ಕೋಡುಗೆ ನಿಡಿದೆ. ಅದಲ್ಲೊ ಜೋಗಿ ಸಮುದಾಯದಲ್ಲಿ ಮಹಿಳೆಯರು ತಮ್ಮದೇ ಆದ ಸಾಂಪ್ರದಾಯಿಕ ಕೌಶಲ್ಯದಿಂದ ತಗಡು ಹಿತ್ತಾಳೆ, ತಾಮ್ರಗಳಿಂದ ವಸ್ತುಗಳನ್ನು ತಯಾರಿಸುವ ಹಾಗೂ ವಸ್ತುಗಳನ್ನು ಮಾರಾಟ ಮಾಡುವ ಮಾರಾಟದಿಂದ ಬಂದಿದ ಹಣವನ್ನು ಖರ್ಚನ್ನು ಮಾಡುವ ಪ್ರತಿಯೊಂದು ಹಂತದಿಂದ ತನ್ನ ವಿಶಿಷತೆಯನ್ನು ಹೊಂದಿದ್ದಾರೆ ಈ ಸಮುದಾಯದ ಮಹಿಳೆಯರು ಮಾಡುವ ಕೆಲಸವನ್ನು ಬೇರೆ ಯಾವುದೇ ಸಮುದಾಯದ ಮಹಿಳೆ ಮಾಡುವುದಿಲ್ಲ ಬೇರೆ ಬೇರೆ ಸಮುದಾಯದಲ್ಲಿ ಕೇವಲ ಉತ್ಪಾದನೆಗೆ ಮಾತ್ರ ಮಹಿಳೆಯನ್ನು ಸೀಮಿತಗೊಳಿಸಲಾಗುತ್ತದೆ. ಆದರೆ ಜೋಗಿ ಸಮುದಾಯದಲ್ಲಿ ಮಹಿಳೆಯರು ಸಂತ ವಸ್ತುಗಳನ್ನು ತಯಾರಿಸುವುದು ಮತ್ತು ಊರೂರು ತಿರುಗಿ ಮಾರುವುದರಲ್ಲಿ ಮತ್ತು ಉತ್ಪಾದನೆಯಿಂದ ಹಿಡಿದು ಮಾರುಕಟ್ಟೆಯದವರಿಗೆ ಅಧಿಕಾರವನ್ನು ಹೊಂದಿದ್ದಾರೆ ಮಹಿಳೆಯುರು ಮಾರುಕಟ್ಟಗೆ ಸಂಬಂಧಿ ವ್ಯಾಪಾರ ವಹಿವಾಟುಗಳಲ್ಲಿ ಒಳ್ಳೆಯ ಸಾಮಾನ್ಯ ಜ್ಞಾನವನ್ನು ಹೊಂದಿದ್ದಾರೆ ಆದರೆ ಇವರು ಶೈಕ್ಷಣಿಕವಾಗಿ, ಸಾಮಾಜಿಕವಾಘಿ ಹಾಗೂ ಸಾಂಸ್ಕೃತಿಕವಾಗಿ ಹಿಂದುದಿದ್ದಾರೆ. ಆದ್ದರಿಂದ ಈ ಅಧ್ಯಯನವು ಜೋಗಿ ಮಹಿಳೆಯರ ಸಾಮಾಝಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಯನ್ನು ಕುರಿತು ಅಭ್ಯಸಿಸುವಾಗಿದೆ.